ಘಟನೆ ಕೂಡಾ. ಅದು ಕೋರ್ಟ್‌ವರೆಗೆ ಹೋಗಲಿಲ್ಲ. ನನ್ನ ಅಧ್ಯಾಪಕ ವೃತ್ತಿಯ ಅನುಭವದಲ್ಲಿ ಅರಳಿದ ಕಥೆ 'ಅಕಾಲ.' ಇದು ಲಂಕೇಶ್ ಪತ್ರಿಕೆಯ 1992ರ ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾಯಿತು. ಎಲ್ಲ ಟೀಕೆ, ನಿಷ್ಠುರತೆಗಳ ಜತೆ ಕಿರಿಯ ಲೇಖಕರ ನಿಜವಾದ ಸಾಮರ್ಥ್ಯವನ್ನು ಅರಿತು ಅವರನ್ನು ಗದರಿಸುತ್ತಲೇ ವಿವೇಕಗಳನ್ನು ಸೂಚಿಸುವ ವ್ಯಕ್ತಿತ್ವ ಲಂಕೇಶರದ್ದಾಗಿತ್ತು. ಸಮಕಾಲೀನರು ಚೆನ್ನಾಗಿ ಬರೆದರೆ, ಪ್ರಶಸ್ತಿ ಬಂದರೆ ಅವರು ಚಿಕ್ಕಮಕ್ಕಳಂತೆ ಹೊಟ್ಟೆಕಿಚ್ಚು ಪಟ್ಟುಕೊಳ್ಳುತ್ತಿದ್ದರು ಕೂಡಾ. ಪತ್ರಿಕಾಲಯದಲ್ಲಿ ಅಂದು ಅನೇಕ ಲೇಖಕರನ್ನು ವಿಮರ್ಶಕರನ್ನು ಕಾಣಬಹುದಿತ್ತು. ಕೆಲವು ಕಾಲ ಅಲ್ಲಿ ಅಂಕಣಗಳನ್ನೂ ಬರೆದೆ. ಎಷ್ಟೇ ವೈರುಧ್ಯಗಳಿದ್ದರೂ ಲಂಕೇಶರಲ್ಲಿ ತಾಯ್ತನವಿತ್ತು. ನನ್ನ ಬರಹಗಳನ್ನು ಕುರಿತ ಪೂರ್ವಗ್ರಹವಿಲ್ಲದ, ಉತ್ಪ್ರೇಕ್ಷೆಗಳಿಲ್ಲದ ವಿಮರ್ಶೆ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. 'ಛಿದ್ರ' ಸಂಕಲನಕ್ಕೆ ಯು.ಆರ್. ಅನಂತಮೂರ್ತಿಯವರು ಮುನ್ನುಡಿ ಬರೆಯುತ್ತಾ, 'ನಾಗತಿಹಳ್ಳಿಯವರ ಹೆಂಗಸರಂತೂ ನಮ್ಮ ಪ್ರಜ್ಞೆಗೆ ಸವಾಲಾಗಬಲ್ಲರು. ಸತ್ಯ ಪಕ್ಷಪಾತಿಯೊಬ್ಬನ ಸಂಕಟ ಅವರ ಉತ್ತಮ ಬರವಣಿಗೆಯ ನೇಯ್ಗೆಯಲ್ಲೇ ಕಾಣುತ್ತದೆ ಎಂಬುದು ನಾನು ಅವರ ಬರವಣಿಗೆಯನ್ನು ಇಷ್ಟಪಡಲು ಕಾರಣ' ಎಂದಿದ್ದರು. 'ಬಂಡಾಯ ಚಳವಳಿಯಿಂದ ಪ್ರಭಾವಿತರಾಗಿದ್ದೂ ಅದನ್ನು ಮೀರಿದವರು' ಎಂದು ದಾಖಲಿಸಿದ್ದರು.

ಮುರು ವಿಭಾಗಗಳಾಗಿ ವಿಂಗಡಿಸಿ 'ಕಥಾ ಯಾತ್ರೆ' ಎಂಬ ಬೃಹತ್ ಕಥಾಸಂಕಲನವನ್ನು ತರುವ ಸಲಹೆಯನ್ನು ಹಿರಿಯ ವಿಮರ್ಶಕರಾದ ಸಿ.ಎನ್. ರಾಮಚಂದ್ರನ್ ನೀಡಿದರು. ಗ್ರಾಮಮುಖಿ, ಪ್ರೇಮಮುಖಿ ಮತ್ತು ನಗರಮುಖಿ ಎಂಬ ಮೂರು ವಿಭಾಗಗಳಲ್ಲಿ ಆಯ್ದ ನಲವತ್ತಕ್ಕೂ ಹೆಚ್ಚು ಕಥೆಗಳು ಅಡಕವಾಗಿವೆ. ಈ ಕಥೆಗಳಿಗೆ ಮುನ್ನುಡಿ ಬರೆಯುತ್ತಾ ಸಿಎನ್‌ಆರ್, 'ಬದುಕಿನ ತರ್ಕಾತೀತ ಸ್ವರೂಪವನ್ನು ತೋರಿಸುವ ಕಥೆಗಳು ಇವು.' ಎಂದಿದ್ದಾರೆ. 'ಇದು ವೈನೋದಿಕ ನಿರುದ್ವಿಗ್ನ ಶೈಲಿ' ಎಂದಿದ್ದಾರೆ. ರೊಮ್ಯಾಂಟಿಸಿಸಂ ಗೆಲ್ಲಲು ನಾನು ಸರ್ಕ್ಯಾಸಂ ಬಳಸತೊಡಗಿದ್ದು ಹೌದು.

ಮಾಸ್ತಿ, ತೇಜಸ್ವಿ, ದೇವನೂರ, ಗೊರೂರು ನಾನು ಇಷ್ಟಪಡುವ ಕಥೆಗಾರರು. ಆದರೆ, ನಾನು ಯಾರೋ ಒಬ್ಬರ ಪ್ರಭಾವಕ್ಕೆ ಒಳಗಾಗಿ ಕಥೆ ಬರೆದವನಲ್ಲ. ನನ್ನ ಅನುಭವಗಳೇ ನನಗೆ ಪ್ರಾಮಾಣ್ಯ. 'ಈಗ ಏಕೆ ಮೊದಲಿನಂತೆ ಕಥೆಗಳನ್ನು ಬರೆಯುತ್ತಿಲ್ಲ?' ಉತ್ತರ ಸುಲಭ. ಅಂಕಣಗಳನ್ನು, ಪ್ರವಾಸಿ ಬರವಣಿಗೆಯನ್ನು, ಚಿತ್ರ ನಿರ್ದೇಶನವನ್ನು ತೊರೆದುಬಿಟ್ಟರೆ ನನ್ನೊಳಗಿನ ಕಥೆಗಾರ ಮರುಹುಟ್ಟು ಪಡೆಯಬಲ್ಲ. ಅಂಕಣವೆಂದರೆ ವಾರಕ್ಕೊಂದು ಹೊಸ ಕಥೆ ಬರೆದಂತೆ. ಪ್ರವಾಸಕಥನಗಳೂ ಅಷ್ಟೇ. ಅದೆಲ್ಲಕ್ಕಿಂತ ಮುಖ್ಯವಾಗಿ ಒಂದು ಸಿನಿಮಾ ಚಿತ್ರಕಥೆಯನ್ನು ರಚಿಸುವಾಗ, ಪ್ರತಿದೃಶ್ಯ ಕಟ್ಟುವಾಗ ಸಣ್ಣ ಕಥೆಯೊಂದನ್ನು ರಚಿಸಿದಷ್ಟೇ ಸವಾಲಾಗಿರುತ್ತದೆ. ಹತ್ತಾರು ಕಥೆಗಳನ್ನೊಳಗೊಂಡು ಚಿತ್ರಕಥೆ ಸಿದ್ಧವಾಗುತ್ತದೆ. ಕಥೆ ಬರೆಯದೆ ಇರುವುದಕ್ಕೆ ಇದು ನೆಪವಲ್ಲ. ನನ್ನೊಳಗಿನ ಕಥೆಗಾರ ರೂಪಾಂತರಗೊಂಡಿದ್ದಾನೆ. ಅವನು ಖಾಲಿ ಕೂತಿಲ್ಲ. ಬೇರೆ ಬೇರೆ ಬಗೆಯ ಕಥನಕ್ರಿಯೆಯಲ್ಲಿ ತೊಡಗಿದ್ದಾನೆ. ಚಿತ್ರಕಥೆಯೊಂದನ್ನು ಹಲವು ಸಲ ತಿದ್ದಿ ಬರೆಯುತ್ತೇನೆ. ಇಲ್ಲಿ ಸಾಹಿತ್ಯ ಸಿನಿಮಾಗಳ ನಡುವೆ ದಪ್ಪಗೋಡೆ ಇರುವುದರಿಂದ ಇತ್ತಣ ದನಿ ಅತ್ತ ಕಡೆಗೆ, ಅತ್ತಣ ಹಾಡು ಇತ್ತ ಕಡೆಗೆ ಕೇಳಿಸುವುದಿಲ್ಲ. ಇದು ದುರದೃಷ್ಟಕರ. ಹಾಗೆ ನೋಡಿದರೆ 'ಕಮಂಗಿಪುರದ ಕಥೆ'– 'ಉಂಡೂ ಹೋದ ಕೊಂಡೂ ಹೋದ'ವಾಗಿ, 'ಭೂಮಿ ಗುಂಡಗಿದೆ'– 'ಒಲವೇ ಜೀವನ